ಲಾಭದಾಯಕವಾಗುವವರೆಗೆ ವೇತನ ಪರಿಷ್ಕರಣೆಗೆ ನಿರ್ಬಂಧವಿರುತ್ತದೆ. ಪರಿಣಾಮವಾಗಿ ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು ಘಟಕದ ನೌಕರರುಗಳಿಗೆ 5ನೇ ವೇತನ ಆಯೋಗದನ್ವಯ ವೇತನ ಪರಿಷ್ಕರಣೆ ನೀಡಲಾಗಿಲ್ಲ.

ಪ್ರಸ್ತುತ ಕೆ.ಎಸ್.ಐ.ಸಿ.ಯು ಬಿಐಎಫ್ಆರ್‌ನ ಪರಿಶೀಲನೆಯಲ್ಲಿದ್ದು ಪುನಶ್ಚೇತನ ಯೋಜನೆಯಡಿ ಒಪ್ಪಿಕೊಂಡಿರುವಂತೆ ಹೆಚ್ಚುವರಿ ಉತ್ಪಾದಕತೆಯ ಸೌಲಭ್ಯವನ್ನು ಮಾತ್ರ ವಿಸ್ತರಿಸಲು ಅವಕಾಶವಿದ್ದು ಇತರೇ ಯಾವುದೇ ರೀತಿಯ ಸೌಲಭ್ಯಗಳನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ. ನಿಗಮವು ಲಾಭದಾಯಕವಾಗಿ ಬಿಐಎಫ್ಆರ್‌ನ ಪರಧಿಯಿಂದ ಹೊರಬಂದ ನಂತರ ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು ಇಲ್ಲಿನ ನೌಕರರುಗಳಿಗೆ 5ನೇ ವೇತನ ಆಯೋಗದನ್ವಯ ವೇತನ ಹಾಗೂ ಇತರೆ ಸೌಲಭ್ಯಗಳನ್ನು ವಿಸ್ತರಿಸಲು ಹಾಗೂ ಕಾಮಿಕ ಸಂಘಟನೆಗಳ ಬೇಡಿಕೆಗಳ ಬಗ್ಗೆ ಪರಿಶೀಲಿಸಲಾಗುವುದು.

ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ಪೂರಕ ವಾತಾವರಣ.

1283(1432) ಶ್ರೀ ಪಿಜಿ.ಎಸ್. ಶಂಕರಲಿಂಗೇಗೌಡ (ಚಾಮರಾಜ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ ಎಷ್ಟು ಕಾರ್ಖಾನೆಗಳು ಮುಚ್ಚಲ್ಪಟ್ಟಿದ್ದು, ಈ ಸಂಬಂಧವಾಗಿ ಕೈಗಾರಿಕೆಗಳಿಗೆ ಪೂರಕ ವಾತಾವರಣ ಸೃಷ್ಟಿ ಮಾಡುವ ಬಗ್ಗೆ ಇದುವರೆವಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಕಳೆದ 2 ವರ್ಷಗಳಿಂದೀಚೆಗೆ ಹೊಸದಾಗಿ ಪ್ರಾರಂಭವಾಗಿರುವ ಕಾರ್ಖಾನೆಗಳು ಯಾವುವು?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :—

ಅ) ರಾಜ್ಯದಲ್ಲಿ ರೋಗಗ್ರಸ್ಥ ಮತ್ತು ಮುಚ್ಚಲ್ಪಟ್ಟ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ, ಈ ಕೆಳಗಿನ ಸೌಲಭ್ಯಗಳನ್ನು ಹೊಸ ಕೈಗಾರಿಕಾ ನೀತಿಯಲ್ಲಿ ನೀಡಲಾಗಿದೆ. ಇದಲ್ಲದೇ, ಬೀಜಧನ ಸಹಾಯ ನೀಡುವ ಯೋಜನೆ ಸಹ ಇರುತ್ತದೆ.

1. ಘಟಕ ಮುಚ್ಚಿರುವ ಅವಧಿಗೆ ಕೆ.ಪಿ.ಟಿ.ಸಿ.ಎಲ್.ನವರು ಫಿಕ್ಸೆಡ್ ಡಿಮ್ಯಾಂಡ್ ಚಾರ್ಜಸ್ ಹಾಕುವಂತಿಲ್ಲ.
2. ಬಾಕಿ ಇರುವ ಮಾರಾಟ ತೆರಿಗೆಯನ್ನು ಮತ್ತು ಕೆ.ಪಿ.ಟಿ.ಸಿ.ಎಲ್. ಬಿಲ್ಲನ್ನು 6 ಅರ್ಧ ವಾರ್ಷಿಕ ಆಧಾರದ ಮೇಲೆ ಮರುಪಾವತಿ ಮಾಡುವುದು, ಮತ್ತು ತಿಂಗಳಿಗೆ ಅರ್ಧ ಬಡ್ಡಿ ವಿಧಿಸುವುದು.

3. ಕೆ.ಪಿ.ಟಿ.ಸಿ.ಎಲ್. ಮಾದಾಟ ತೆರಿಗೆ ಇಲಾಖೆಯವರು ಘಟಕಗಳು ಮುಚ್ಚಿದ ಅವಧಿಗೆ ಬಡ್ಡಿ ವಿಧಿಸುವಂತಿಲ್ಲ.
4. ಮುಂದಿನ ವರ್ಷದ ಮಾದಾಟ ತೆರಿಗೆ ಪಾವತಿ ಮಾಡಲು 3 ವರ್ಷಗಳವನ್ನು ಮುಂದೂಡುವುದು.
5. ಸರ್ಕಾರಿ ಆದೇಶ ಸಂಖ್ಯೆ ಸಿಐ : 26 ಐಐಎಫ್ 95 ದಿನಾಂಕ: 19-11-97ರ ಪ್ರಕಾರ ಉಳಿದ ಉತ್ತೇಜನಗಳು.

ಅ) ಕಳೆದ ಎರಡು ವರ್ಷಗಳಿಂದ ಈ ಕೆಳಕಂಡ ಘಟಕಗಳು ಪ್ರಾರಂಭವಾಗುತ್ತವೆ.

1. ಮೆ: ಸಾಯಿಲಕ್ಷ್ಮಿ, ಇಂಡಸ್ಟ್ರೀಸ್, ಕೈಗಾರಿಕಾ ಪ್ರದೇಶ, ಮೈಸೂರು.
2. ಮೆ: ಚಾಮುಂಡಿ ಟಿಕ್ಸ್‌ಟೈಲ್ಸ್, ಬೆಳಕವಾಡಿ ಕೈಗಾರಿಕಾ ಪ್ರದೇಶ, ಮೈಸೂರು.
3. ಮೆ: ವೆಸ್ಟಾನ್ ಪಾಲಿಸ್ಟರ್ ಫಿಲಂ ಲಿಮಿಟೆಡ್ (ಯೂನಿಟ್-2) ಬೆಳವಾಡಿ ಕೈಗಾರಿಕಾ ಪ್ರದೇಶ, ಮೈಸೂರು.
4. ಮೆ: ಸುದರ್ಶನ ಟಿಲಿಹಾಂ (ಯೂನಿಟ್-2) ಹೆಬ್ಬಾಳ ಕೈಗಾರಿಕಾ ಪ್ರದೇಶ, ಮೈಸೂರು.

ಗಡಿ ಪ್ರದೇಶಾಭಿವೃದ್ಧಿಯ ಕಾಮಗಾರಿಗಳಿಗೆ ಬಿಡುಗಡೆಯಾದ ಹಣ.

1284(1487) ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗಡಿ ಪ್ರದೇಶಾಭಿವೃದ್ಧಿ ಮಂಡಳಿಗೆ 2000-01 ಮತ್ತು 2001-02ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾಗಿರುವ ಹಣ ಎಷ್ಟು? ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಕೊಡುವುದು.

ಆ) ಬಿಡುಗಡೆಯಾಗಿರುವ ಹಣದಲ್ಲಿ ಯಾವ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತಗೊಳಿಸಲಾಗಿದೆ. ಕ್ಷೇತ್ರವಾರು ವಿವರಗಳನ್ನು ಕೊಡುವುದು.

ಶ್ರೀ ಆರ್.ವಿ. ತಿಮ್ಮಾಪುರ್ (ಯೋಜನಾ ಸಚಿವರು) :—

ಅ) ಗಡಿ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ತಾಲ್ಲೂಕು ಒಂದು ಘಟಕ. ತಾಲ್ಲೂಕುವಾರು ಹಣ ಬಿಡುಗಡೆ ಮಾಡಲಾಗುವುದು. ಕ್ಷೇತ್ರವಾರು ಹಣ ಬಿಡುಗಡೆ ಮಾಡಲಾಗುವುದಿಲ್ಲ. ತಾಲ್ಲೂಕುವಾರು ಬಿಡುಗಡೆ ಮಾಡಿದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಗಡಿ ಅಭಿವೃದ್ಧಿ ಯೋಜನೆಯಲ್ಲಿ ಕಾಮಗಾರಿಗಳನ್ನು ಅನುಮೋದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ನೇಮಿಸಲಾಗಿದ್ದು, ಇದರಲ್ಲಿ ಸ್ಥಳೀಯ ಶಾಸಕರು ಸದಸ್ಯರಾಗಿರುತ್ತಾರೆ. ಈ ಯೋಜನೆಯಲ್ಲಿ ರಸ್ತೆ ಮತ್ತು ಸೇತುವೆ, ಶಾಲಾ ಕಟ್ಟಡ, ಪಶು ಚಿಕಿತ್ಸಾಲಯ, ಆರೋಗ್ಯ ಕಟ್ಟಡ, ಅಂಗನವಾಡಿ ಗ್ರಾಮೀಣ ನೀರು ಸರಬರಾಜು, ತೆಗೆದುಕೊಳ್ಳಲಾಗುವುದು.